ಸುಂದರ್ ಕಂಗಾಲಾದ. ಇದೇನು ವಿಚಿತ್ರ ಇವಳ ಸ್ವಭಾವ. ಇವಳೇ ಅಲ್ಲವೇ ಏನೇ ಮೌನಿಯಾದರೂ ಶಿಸ್ತು, ಸಂಯಮದ ವಿಚಾರ ಬಂದರೆ ಕೂಗಾಡಿ ಮನೇ ಎಲ್ಲ ಒಂದು ಮಾಡಿಬಿಡುತ್ತಾಳೆ. ರಂಗೋಲಿ ಬಿಡಿಸೋದು ತಡ ಆದರೆ ಸಾಕು ಮೈಮೇಲೆ ಬಂದಂತೆ ಕೆಲಸ ಮಾಡುತ್ತಾಳೆ. ದೇವರ ಮುಂದಿನ ದೀಪ ಆರದಂತೆ ಇಡೀ ದಿನ ಎಚ್ಚರಿಕೆ ವಹಿಸುತ್ತಾಳೆ. ರಾತ್ರಿ ಒಂದು ವೇಳೆ ಆರಿಹೋದರೆ... 'ಅಯ್ಯಯ್ಯೋ ಆರಿಬಿಟ್ಟಿತಲ್ಲ... ಯಾಕೆ...' ಎಂದು ಕೇಳುತ್ತಾ ಮತ್ತೆ ಅದೇ ಮೊದಲ ಕೆಲಸವೆಂಬಂತೆ ಹಚ್ಚಿಡುತ್ತಾಳೆ. ಊಟ, ತಿಂಡಿ ಎಲ್ಲದರಲ್ಲಿಯೂ ಅದರದರ ಶಿಸ್ತು ಕಾಪಾಡಿಕೊಂಡು 'ಮನೆಯಿಂದ ಶಿಸ್ತು ಕಲಿಯಬೇಕು. ಹೊರಗಿನ ಪ್ರಪಂಚ ನಮ್ಮನ್ನು ನೋಡುವಾಗ ಮನೆ ಏನು ಹೇಳಿಕೊಟ್ಟಿದೆ ಅಂತ ಅದಕ್ಕೆ ಅರ್ಥ ಆಗಬೇಕು' ಅಂತೆಲ್ಲಾ ಹೇಳುತ್ತ ತನ್ನ ಜೀವನದ ವಿಧಾನವನ್ನೇ ತಿದ್ದಿಬಿಟ್ಟವಳು!... ಸುಂದರಂ ಯೋಚಿಸಿದ... ತಾನು ಕ್ರಾಂತಿ, ಬಂಡಾಯ ಅಂತೆಲ್ಲ ಪೋಸ್ ಕೊಡುತ್ತ ಓಡಾಡುತ್ತಿದ್ದಾಗ, ನಾನೇ ಅದರ ಹೀರೋ ಅದನ್ನ ಮನೆಯಲ್ಲಿ ಮೊದಲು ಪ್ರಾರಂಭ ಮಾಡಬೇಕು ಅಂತೆಲ್ಲ ಯೋಚಿಸುತ್ತಿದ್ದ ಸುಂದರ್‌ನನ್ನು ಇದೇ ಸುಮತಿ, ಮರ್ಯಾದೆ, ಮನೆ, ಕುಲ, ಘನತೆ... ಅಂತೆಲ್ಲಾ ಮಾತಾಡುತ್ತ ತಿದ್ದಿ ತೀಡಿ ಅವನ ವ್ಯಕ್ತಿತ್ವಕ್ಕೆ ಬೇರೆ ಮೆರಗನ್ನೇ ತಂದುಬಿಟ್ಟಿದ್ದಳು. ಅಂತಹ ಸುಮತಿ ಈಗ ಮಕ್ಕಳ ವಿಚಾರದಲ್ಲಿ ನಾನು ಶಿಸ್ತು ಅಂದರೆ ಏನೋ ಮಾತಾಡ್ತ ಇದ್ದಾಳಲ್ಲ!!

ಮರುದಿನ ಸುಂದರ್ ಬೇಕೆಂದೇ ತಡಮಾಡಿ ಎದ್ದ. ಮಗ, ಮತ್ತು ಮಗಳಿಗೆ ಕಾಫಿ ಕೊಡಲು ಹೋದ ಸುಮತಿ ಕಂಡಳು. ಅವನು ಮೌನವಾದ. ಕಾಫಿ ಕೊಟ್ಟಾಗ ಮಗ ಕೇಳಿದ ಅಮ್ಮನನ್ನು 'ಅಮ್ಮ ಅಪ್ಪ ತುಂಬಾ ಸಿಟ್ಟು ಮಾಡಿಕೊಂಡಿದ್ದಾರಾ?'

'ಅಪ್ಪ ರಾತ್ರಿ ನಮ್ಮನ್ನ ಬೈದರೇನಮ್ಮ?' ಮಗಳು ಕೇಳಿದಳು.

'ಅವರ ಸಿಟ್ಟು ಮತ್ತು ಬೈಗುಳಕ್ಕೆ ನೀವು ಎಷ್ಟು ಬೆಲೆ ಕೊಡ್ತೀರ?' ಇವಳ ಪ್ರಶ್ನೆ.

'ಸಾರಿಮ್ಮ... ಪ್ಲೀಸ್' ಇಬ್ಬರೂ ಮಕ್ಕಳ ಧ್ವನಿ.

'ಮಾತಿಗೆ ಎಲ್ಲೆ ಇಲ್ಲದಿದ್ರೆ ನಡವಳಿಕೇಗೂ ಇರಲ್ಲ. ಇದನ್ನ ನೀವಿಬ್ರೂ ತಿಳಿಯಲೇಬೇಕು' ಇವಳ ಧ್ವನಿ ನಿರ್ವಿಕಾರವಾಗಿತ್ತು.

ಮತ್ತೆರಡು ಮೂರು ದಿನ ಸುಂದರ್ ಬಿಗುವಾಗಿಬಿಟ್ಟ. ಅವನ ಮನಸ್ಸಿನ ತುಂಬಾ ಗೊದಲದ ಗೂಡುಗಳು ಕಟ್ಟಿಕೊಂಡವು. ಕಂಪೆನಿಯಲ್ಲೂ ಇದೇ ತರಹದ ಮಾತುಗಳು ಕೇಳಿಬರುತ್ತಿದ್ದವು. ಇಷ್ಟು ವರುಷ ಯಾವ ಸುದ್ದಿಯೂ ಅವನನ್ನು ಕಾಡುತ್ತಿರಲಿಲ್ಲ. ಆದರೆ, ಈಗ ಪ್ರತಿಯೊಂದು ಮಾತೂ ಹುಳದಂತೆ ಮನಸ್ಸನ್ನು ಕೊರೆಯಲು ಪ್ರಾರಂಭವಾಯಿತು.

ಪಕ್ಕದ ಚೇರ್‌ನ ಸತೀಶ್ 'ನಮ್ಮ ಪಕ್ಕದ ಮನೆ ಹುಡುಗಿ ಬೇರೆ ಜಾತಿಯವನನ್ನ ಮದುವೆ ಆಗಿ ಕರಕೊಂಡು ಬಂದೇ ಬಿಟ್ಟಳು. ಅವರ ಮನೆ ಪೇಚಾಟ ಕೇಳಬಾರದು' ಅಂದಾಗ ಇವನ ಮನಸ್ಸಿನಲ್ಲಿ 'ನಮ್ಮ ಪುಟ್ಟೀನೂ ನಾಳೆ ಹೀಗೇ ಮಾಡಿಬಿಟ್ಟರೆ...' ಅನ್ನಿಸಿ ಹೊಟ್ಟೆಯಲ್ಲೆಲ್ಲ ಸಂಕಟವಾಯಿತು. ಕಂಪೆನಿಯ ಸೆಕ್ಯೂರಿಟಿ ಗಾರ್ಡ್ 'ನಮ್ಮ ಎದುರು ಮನೆ ಹುಡುಗ ದಿನಾ ಒಂದೊಂದು ಹುಡುಗೀನ ಬೈಕ್‌ನಲ್ಲಿ ಕೂರಿಸಿಕೊಂಡು ಓಡಾಡ್ತಾನೆ ಸರ್. ಅವರ ತಾಯಿ ತಂದೆ ತಲೆ ಎತ್ತದಂತೆ ಆಗಿಬಿಟ್ಟಿದೆ' ಅಂದಾಗ 'ನಮ್ಮ ಮನೆ ರಾಜಕುಮಾರನೂ ನಾಳೆ ಹೀಗೇ ಮಾಡಿಬಿಟ್ಟರೆ' ಅಂತ ಅವನಿಗೆ ಅನ್ನಿಸತೊಡಗಿತು. ಯಾವ ಹುಡುಗ ಹುಡುಗೀನ ಒಟ್ಟಿಗೇ ನೋಡಿದ್ರೂ ಅವನ ತಲೆ ಬಿಸಿಯಾಗಲು ಪ್ರಾರಂಭವಾಗತೊಡಗಿತು. ಮೊದಲು ಏನೂ ಆಗದ್ದು, ಈ ಹುಳ ಕೊರೆಯಲು ಪ್ರಾರಂಭ ಆದ ನಂತರ ಮನಸ್ಸು ಪೂರಾ ಕೆಟ್ಟುಬಿಟ್ಟಿತು. ಒಂದೇ ವಾರದಲ್ಲಿ ಅವನ ಕೂದಲು ಹೆಚ್ಚು